**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>**

**<u>Spl.C.NDPS.8/2021</u>**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹಮ್ಮದ್ ಶಾಹೀನ್ |
| ತಂದೆಯ ಹೆಸರು | : | ಅಬ್ದುಲ್ ಮತೀನ್ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಅಬಕಾರಿ ಪೇದೆ, ಜಂಟಿ ಆಯುಕ್ತ ಕಛೇರಿ, ದಾವಣಗೆರೆ ವಿಭಾಗ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 8

ಸಿ.ಡಬ್ಲ್ಯೂ 3

ದಿ: 27-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)</u>**:

1. ನಾನು 2019 ರಿಂದ ಜುಲೈ 2025 ರವರೆಗೆ ಅಬಕಾರಿ ಪೇದೆಯಾಗಿ ದಾವಣಗೆರೆ ಅಬಕಾರಿ ನಿರೀಕ್ಷರ ಕಛೇರಿ ವಲಯ-1 ರಲ್ಲಿ ಕೆಲಸ ಮಾಡಿದ್ದೇನೆ. ಈ ಪ್ರಕರಣದಲ್ಲಿ ದಿಃ 03-04-2021 ರಂದು CEN ಪೊಲೀಸ್ ಠಾಣೆಯ ಚಾಸಾ-1 ರವರು ತಮ್ಮ ಸಿಬ್ಬಂದಿ ಕೊಟ್ರೇಶ್ ರವರಿಂದ ವಲಯ ಕಛೇರಿಗೆ ಇಬ್ಬರು ಸರ್ಕಾರಿ ಪಂಚರನ್ನು ಕಳುಹಿಸಿಕೊಡಬೇಕೆಂದು ಮನವಿ ಸಲ್ಲಿಸಿದಾಗ, ಅಬಕಾರಿ ನಿರೀಕ್ಷಕರು ದಾವಣಗೆರೆಯ ವಲಯ -1 ಇವರು ನನ್ನನ್ನು ಮತ್ತು ಚಾಸಾ-2 ರವರನ್ನು ನೇಮಕ ಮಾಡಿ ಕಳುಹಿಸಿರುತ್ತಾರೆ. ಅವರ ಆದೇಶದ ಮೇರೆಗೆ ಅದೇ ದಿನ ಬೆಳಿಗ್ಗೆ 10.45 ಗಂಟೆಗೆ ನಾನು ಮತ್ತು ಚಾಸಾ-2 ರವರು ಚಾಸಾ-1 ರವರ ಮುಂದೆ ಹಾಜರಾಗಿ ವರದಿ ಮಾಡಿಕೊಂಡಿದ್ದೇವೆ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.